ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

ಸಿ ಸಿ ನಂ. **735/2015**

ದಿಃ **09-09-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

| | | | |
|---|---|---|---|
| ಹೆಸರು | ಸುಬ್ರಹ್ಮಣಿ ಬಿ. | ಸಿ.ಡಬ್ಲ್ಯು | **05** |
| ವಯಸ್ಸು | 54 ವರ್ಷ | ಪಿ.ಡಬ್ಲ್ಯು | **03** |
| ತಂದೆಯ ಹೆಸರು | ವೆಂಕಟರಮಣಪ್ಪ | | |
| ವೃತ್ತಿ | ಎ.ಎಸ್.ಐ | | |
| ವಾಸಸ್ಥಳ | ಚಿಕ್ಕಬಳ್ಳಾಪುರ ನಗರ ಮತ್ತು ಜಿಲ್ಲೆ | | |

ಮುಖ್ಯ ವಿಚಾರಣೆಃಃ ಶ್ರೀ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 16.11.2014 ರಿಂದ 25.06.2016 ರವರೆಗೆ ಅಬಕಾರಿ ಮತ್ತು ಲಾಟ್ರಿ ನಿಷೇದ ವಿಶೇಷ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 21.12.2014 ರಂದು ಠಾಣೆಯಲ್ಲಿ ನಾನು ಕರ್ತವ್ಯವನ್ನು ನಿರ್ವಹಿಸುತ್ತಿದ್ದಾಗ ಠಾಣೆಯ ಎಸ್.ಹೆಚ್.ಓ ಆದ ಚಾ.ಸಾ-1 ರವರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ನನ್ನನ್ನು ಮತ್ತು ಠಾಣೆಯ ಸಿಬ್ಬಂದಿಯಾದ ಚಾ.ಸಾ-4,6,7 ಹಾಗೂ ಜೀಪ್ ಚಾಲಕನಾದ ಚಾ.ಸಾ-8 ರವರನ್ನು ಚಾ.ಸಾ-1 ರವರು ಕೆ.ಎ 40 ಜಿ 270 ನೋಂದಣಿಯ ಇಲಾಖಾ ವಾಹನದಲ್ಲಿ ನಮ್ಮನ್ನು ಕರೆದುಕೊಂಡು ಸಂಜೆ 04.00 ಗಂಟೆಗೆ ಠಾಣೆಯಿಂದ ಹೊರಟು ಗೌರಿಬಿದನೂರು ಮಾರ್ಗವಾಗಿ ಹಾಲಗಾನಹಳ್ಳಿ ಮತ್ತು ಚಂದನದೂರು ಸಮೀಪ ವಾಹನವನ್ನು ನಿಲ್ಲಿಸಿಕೊಂಡು ನೋಡುತ್ತಿದ್ದಾಗ ಒಬ್ಬ ವ್ಯಕ್ತಿಯು ಒಂದು ಬಿಳಿ ಚೀಲದಲ್ಲಿ ಒಂದು ಕ್ಯಾನ್ ಅನ್ನು ತಲೆಯ ಮೇಲೆ ಹೊತ್ತುಕೊಂಡು ನಡೆದುಕೊಂಡು ಬರುತ್ತಿರುವುದು ಕಂಡುಬಂದಿತು. ನಂತರ ಅನುಮಾನದ ಮೇರೆಗೆ ಚಾ.ಸಾ-1 ರವರ ಆದೇಶದಂತೆ ಆತನನ್ನು ವಿಚಾರಣೆ ಮಾಡಲು ಆತನ ಬಳಿ ಹೋಗುವಷ್ಟರಲ್ಲಿ ನಮ್ಮನ್ನು ಮತ್ತು ಇಲಾಖಾ ವಾಹನವನ್ನು ನೋಡಿ ಸದರಿ ವ್ಯಕ್ತಿಯು ಕಾನ್ ಅನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋದನು.

ನಂತರ ಸ್ಥಳದಲ್ಲಿದ್ದ ಸಾರ್ವಜನಿಕರ ಪೈಕಿ ಪಂಚರಾಗಿ ಸಹಕರಿಸಲು ಒಪ್ಪಿಕೊಂಡ ಚಾ.ಸಾ-2 ಮತ್ತು 3 ರವರ ಸಮಕ್ಷಮ ಬಿಳಿ ಚೀಲದಲ್ಲಿದ್ದ ಕ್ಯಾನಿನ ಮುಚ್ಚಳವನ್ನು ತೆಗೆದು ನೋಡಿದಾಗ ಅದರಲ್ಲಿ ಸೇಂದಿ ಇರುವ ನಿಶಾನೆಗಳು ಕಂಡುಬಂದಿತು. ನಂತರ ಚಾ.ಸಾ-

1 ರವರು ಅಳತೆ ಮಾಪನ ಯಂತ್ರವನ್ನು ತಂದು ಸದರಿ 40 ಲೀ ಸಾಮರ್ಥ್ಯದ ಕ್ಯಾನ್ ನಲ್ಲಿದ್ದ 20 ಲೀ ಸೇಂದಿಯ ಪೈಕಿ 180 ಎಂ.ಎಲ್ ನಷ್ಟು ದ್ರವ್ಯವನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಬೇರ್ಪಡಿಸಿ ಅದನ್ನು ಗಾಜಿನ ಬಾಟಲಿನಲ್ಲಿ ಶೇಖರಿಸಿ ಸದರಿ ಬಾಟಲ್ ಅನ್ನು ಬಿಳಿ ಬಟ್ಟೆಯಿಂದ ಸುತ್ತಿ ಇಲಾಖಾ ಮೊಹರನ್ನು ಹಾಕಿ ಪಂಚನಾಮೆಯ ಕ್ರಮವನ್ನು ಕೈಗೊಳ್ಳಲಾಯಿತು. ನಂತರ ಓಡಿ ಹೋದ ವ್ಯಕ್ತಿಯ ವಿಚಾರವನ್ನು ಕೇಳಲಾಗಿ ಆತನು ಹಂಪಸಂದ್ರ ಗ್ರಾಮದ ಅಶೋಕ ಬಿನ್ ಚಿಕ್ಕನರಸಿಂಹಪ್ಪ ಎಂಬ ವಿಚಾರ ನಮಗೆ ತಿಳಿಯಿತು. ವಶಪಡಿಸಿಕೊಂಡ ಮಾಲನ್ನು ಮುಂದಿನ ಕ್ರಮಕ್ಕಾಗಿ ಠಾಣೆಗೆ ತೆಗೆದುಕೊಂಡು ಬಂದೆವು. ಸಾಕ್ಷಿಯು ನಿಪಿ-1 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1 ಡಿ ಎಂದು ಗುರುತಿಸಲಾಯಿತು. ನಂತರ ನಾನು ಚಾ.ಸಾ-1 ರವರಿಗೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೇಳಿಕೆಯನ್ನು ನೀಡಿರುತ್ತೇನೆ.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು